

No.MAG(3)/NPP/98/2023-2024

No.MAG(3)/NPP/99/2023-2024



ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೨೩

ಸಂಪುಟ: ೧೪ ಸಂಚಿಕೆ: ೩ | ಜೂನ್ ೨೦೨೬ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ಪರಾಭವ ಸಂವತ್ಸರ
Volume: 14 Issue: 3 | June 2026 | Pages-8 | Annual Subscription Rs.20/- | ಜೇಷ್ಠ-ಜೇಷ್ಠ ಅಧಿಕ ಮಾಸ



ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**



**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ



**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-



**ದಿ| ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕ
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷ

**ಪದಾಧಿಕಾರಿಗಳು**

- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೪೮
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷಕ**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕ**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ


**ಸಂನುಡಿ**

## ಭೌತಿಕ ಸಾಹಿತ್ಯ ಪ್ರಕಾಶನದ ಅವನತಿ

## ಡಿಜಿಟಲ್ ಯುಗದ ಸವಾಲು ಮತ್ತು ಅವಕಾಶ

ಭೌತಿಕ ಸಾಹಿತ್ಯ ಪ್ರಕಾಶನವು ಇತ್ತೀಚಿನ ದಿನಗಳಲ್ಲಿ ಕುಗ್ಗುತ್ತಿರುವುದು ಸ್ಪಷ್ಟ. ಪತ್ರಿಕೆ, ಮಾಸಪತ್ರಿಕೆ, ಕಾದಂಬರಿ, ಕವನ ಸಂಕಲನಗಳೆಲ್ಲವೂ ಡಿಜಿಟಲ್ ಮಾಧ್ಯಮದ ಪ್ರಭಾವದಿಂದ ಭೌತಿಕ ಸಾಹಿತ್ಯ ಓದುಗರ ಗಮನ ಸೆಳೆಯುವಲ್ಲಿ ವಿಫಲವಾಗುತ್ತಿವೆ. ಆದರೆ ಇದು ಕೇವಲ ಅವನತಿ ಮಾತ್ರವಲ್ಲ; ರೂಪಾಂತರದ ಹಾದಿಯಲ್ಲಿರುವ ಒಂದು ಸಂಸ್ಕೃತಿಯ ಕಥೆ. ಈ ಪರಿವರ್ತನೆ ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸೀಮಿತವಲ್ಲ.


**ಈ ರೀತಿಯ ಅವನತಿಗೆ ಕಾರಣಗಳುಂಟು.**

- **ಡಿಜಿಟಲ್ ಪ್ರವಾಹ:** ಇಂಟರ್ನೆಟ್, ಸ್ಮಾರ್ಟ್‌ಫೋನ್, ಸಾಮಾಜಿಕ ಮಾಧ್ಯಮ – ಎಲ್ಲವೂ ತಕ್ಷಣದ ಮಾಹಿತಿಯನ್ನು ನೀಡುತ್ತಿವೆ.
- **ಓದುಗರ ಅಭ್ಯಾಸ ಬದಲಾವಣೆ:** ಯುವಜನರು ಇ–ಪುಸ್ತಕ, ಬ್ಲಾಗ್, ಆಡಿಯೋ ಪುಸ್ತಕಗಳನ್ನು ಹೆಚ್ಚು ಮೆಚ್ಚುತ್ತಿದ್ದಾರೆ.
- **ಕಣ್ಣೆದುರಿಗೆ ಓದುತ್ತಾ, ಘಟನಾವಳಿಗಳನ್ನು ಜೀವಂತವಾಗಿ ನೋಡುವ ಆನಂದ.**
- **ಪ್ರಕಾಶಕರ ಮೇಲೆ ಆರ್ಥಿಕ ಒತ್ತಡ:** ಜಾಹೀರಾತು ಆದಾಯ ಕುಸಿತದಿಂದ ಮುದ್ರಿತ ಪ್ರಕಾಶನ ಸಂಸ್ಥೆಗಳು ದುರ್ಬಲವಾಗಿವೆ.
- **ಸಾಮಾಜಿಕ ಮಾಧ್ಯಮದ ಪ್ರಭಾವ:** ತ್ವರಿತ ಪ್ರತಿಕ್ರಿಯೆ, ನಾಗರಿಕ ಪತ್ರಿಕೋದ್ಯಮ ಎಲ್ಲವೂ ಮುದ್ರಿತ ಮಾಧ್ಯಮವನ್ನು ಹಿಂಬಾಲಿಸುತ್ತಿವೆ.

**ಆದರೂ ಇನ್ನೂ ಜೀವಂತವಾಗಿರುವ ಅಂಶಗಳು ಭೌತಿಕ ಸಾಹಿತ್ಯಕ್ಕೆ ಸ್ವಲ್ಪ ಮಟ್ಟಿಗೆ ಸಧ್ಯದಲ್ಲಿ ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿವೆ.**

## ಭಾವಪೂರ್ಣ ಶ್ರದ್ಧಾಂಜಲಿ

### ಡಾ. ಪ್ರಭಾಕರ ಬೆಳವಾಡಿ, ಸಂಪಾದಕರು, ಹೊಂಗನಸು ವಾರ್ತಾಪತ್ರ



ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಕೋಶಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಪ್ರಸ್ತುತ 'ಹೊಂಗನಸು' ವಾರ್ತಾಪತ್ರದ ಸಂಪಾದಕರಾಗಿ ಅದಕ್ಕೊಂದು ಆಕರ್ಷಕ ವಿನ್ಯಾಸ ರೂಪಿಸಿ, ಸಮಯೋಚಿತ ಮತ್ತು ಚಿಂತನಾರ್ಹ ಸಂಪಾದಕೀಯ ಬರೆದು ಓದುಗರನ್ನು ಆಕರ್ಷಿಸುತ್ತಿದ್ದ ಡಾ.ಪ್ರಭಾಕರ ಬೆಳವಾಡಿ ಅವರು ೬.೬.೨೦೨೬ ಮಧ್ಯಾಹ್ನ ಅನಾರೋಗ್ಯದ ಕಾರಣದಿಂದ ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಬಿ.ಎಂ.ಶ್ರೀ. ಅವರ ಬಂಧುಗಳೂ ಆಗಿದ್ದ ಶ್ರೀಯುತರು ಪ್ರತಿಷ್ಠಾನದ ಪುರೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ಈ ಸಂದರ್ಭದಲ್ಲಿ ಪ್ರತಿಷ್ಠಾನವು ಅವರ ಆತ್ಮಕ್ಕೆ ಶಾಂತಿ ಕೋರಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

- **ಸಾಂಸ್ಕೃತಿಕ ಮೌಲ್ಯ:** ಮುದ್ರಿತ ಪುಸ್ತಕವು ಉಡುಗೊರೆ, ಸಂಗ್ರಹಣೆ, ಗ್ರಂಥಾಲಯ ಹೀಗೆ ಕೆಲವೆಡೆ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.
- **ಸ್ಥಳೀಯ ಭಾಷಾ ಸಾಹಿತ್ಯ:** ಕನ್ನಡ, ತಮಿಳು, ತೆಲುಗು ಮುಂತಾದ ಭಾಷಾ ಸಾಹಿತ್ಯವು ಇನ್ನೂ ಮುದ್ರಿತ ರೂಪದಲ್ಲಿ ಓದುಗರನ್ನು ಸೆಳೆಯುತ್ತಿವೆ.
- **ಸಾಹಿತ್ಯ ಮೇಳಗಳು:** ಪುಸ್ತಕ ಪ್ರದರ್ಶನಗಳು, ಸಾಹಿತ್ಯ ಸಮ್ಮೇಳನಗಳು ಮುದ್ರಿತ ಸಾಹಿತ್ಯದ ಜೀವಂತಿಕೆಯನ್ನು ಉಳಿಸುತ್ತಿವೆ.
- **ಆಡಿಯೋ ರೂಪಾಂತರ:** ಇಂದಿನ ದಿನಗಳಲ್ಲಿ ಸಾಹಿತ್ಯವು ಆಡಿಯೋ ರೂಪದಲ್ಲೂ ಲಭ್ಯವಿರುವುದರಿಂದ ದೃಷ್ಟಿಹೀನರೂ ಸುಲಭವಾಗಿ ಸಾಹಿತ್ಯವನ್ನು ಅರಿತು ಆನಂದಿಸಬಹುದು. ಇದು ಡಿಜಿಟಲ್ ಯುಗದ ಒಂದು ಮಹತ್ವದ ಸಾಮಾಜಿಕ ಸಾಧನೆ.



**ಬದುಕುಳಿಯುವ ಮಾರ್ಗ**

- **ಹೈಬ್ರಿಡ್ ಮಾದರಿ:** ಮುದ್ರಿತ ಮತ್ತು ಡಿಜಿಟಲ್ ಎರಡನ್ನೂ ಸಮಾನವಾಗಿ ಬಳಸುವ ಪ್ರಕಾಶನ.
- **ಡಿಜಿಟಲ್ ರೂಪಾಂತರ:** ಇ–ಪುಸ್ತಕ, ಆಡಿಯೋ ಬುಕ್, ಆನ್‌ಲೈನ್ ಪತ್ರಿಕೆ–

ಇವು ಹೊಸ ಪೀಳಿಗೆಯ ಓದುಗರನ್ನು ಸೆಳೆಯುತ್ತಿದ್ದರೂ, ಅನೇಕರು ಭೌತಿಕ ವ್ಯವಸ್ಥೆಗೆ ಹೊಂದಿಕೊಂಡಿರುವುದು.

- **ಸಮುದಾಯ ಆಧಾರಿತ ಪ್ರಕಾಶನ:** ಮಕ್ಕಳ ಸಾಹಿತ್ಯ, ಜನಪದ ಗೀತೆಗಳು ಮುದ್ರಿತ ರೂಪದಲ್ಲಿ ಇನ್ನೂ ಬೇಡಿಕೆ ಹೊಂದಿವೆ.
- **ಹಲವು ಭಾಷೆಗಳ ಸಾಹಿತ್ಯ ಇನ್ನೂ ಡಿಜಟಲೀಕರಣಗೊಳ್ಳದಿರುವುದು.**
- **ಗ್ರಂಥಾಲಯಗಳ ಅಸ್ತಿತ್ವ ಮತ್ತು ಅವಕ್ಕೆ ಇರುವ ತನ್ನದೇ ಆದ ಐತಿಹಾಸಿಕ ಕುರುಹು.**

**ಸಂಪಾದಕೀಯದ ನಿಲುವು**

ಭೌತಿಕ ಸಾಹಿತ್ಯ ಪ್ರಕಾಶನವು **ಅವನತಿಯ ಹಾದಿಯಲ್ಲಿ ಸಾಗುತ್ತಿದ್ದರೂ ಅದು ಕೆಲವು ಕಾಲ ಅಪ್ರಸ್ತುತವಾಗದೇ ಉಳಿಯಬಹುದು.** ಡಿಜಿಟಲ್ ಮಾಧ್ಯಮವು ತ್ವರಿತ, ಸುಲಭ, ವ್ಯಾಪಕವಾದರೂ ಮುದ್ರಿತ ಸಾಹಿತ್ಯವು ಸ್ಪರ್ಶದ ಅನುಭವ, ಶಾಶ್ವತ ಸಂಗ್ರಹಣೆ, ಆಳವಾದ ಓದುಗರ ಬಯಕೆ ನೀಗಿಸುತ್ತದೆ. ಹೆಸರಾಂತ ಪ್ರಕಾಶನ ಸಂಸ್ಥೆಗಳು ಹೈಬ್ರಿಡ್ ಮಾದರಿಯನ್ನು ಅಳವಡಿಸಿಕೊಂಡರೆ ಮುದ್ರಿತ ಸಾಹಿತ್ಯವು ತನ್ನ ಸ್ಥಾನವನ್ನು ಉಳಿಸಿಕೊಳ್ಳಬಹುದು.

ಏನೇ ಆದರೂ ಸಾಮಾಜಿಕ ಪರಿವರ್ತನೆಯ ಕ್ರಾಂತಿಗೆ ಸಾಹಿತ್ಯಪ್ರಿಯರೂ ಅಳವಡಿಸಿಕೊಳ್ಳುವ ಪರಿಸ್ಥಿತಿ ಬರುವುದು ಖಚಿತ. 'ಅಟ್ಟದಿಂದ ಬಿದ್ದವರಿಗೆ ದೊಣ್ಣೆಯಿಂದ ಹೊಡೆದರು' ಅನ್ನುವಂತೆ ಕಟ್ಟಡಗಳ ನಿರ್ವಹಣೆ ಮತ್ತು ಭೌತಿಕ ಸಾಹಿತ್ಯಗಳ ಸಂಸ್ಕರಣೆ ಎಚ್ಚರಿಕೆಯ ಘಂಟೆಯನ್ನು ಬಾರಿಸಬಹುದು.

**ಡಾ. ಬೆಳವಾಡಿ. ಕೃ ಪ್ರಭಾಕರ್**
ಸಂಪಾದಕರು

## ಮೇ ಮಾಹೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮಗಳ ವರದಿ

### ದಿನಾಂಕ ೦೫/೦೫/೨೦೨೬ ಮಂಗಳವಾರ ಪ್ರೊ. ಕ.ವೆಂ. ರಾಘವಾಚಾರ್, ಡಿ.ವಿ.ಜಿ., ಪ್ರೊ. ಬಿ.ಎಸ್. ಸಣ್ಣಯ್ಯ ಮತ್ತು ಡಾ. ಎಂ.ಎಲ್. ಲಲಿತಮ್ಮ ದತ್ತಿ ಉಪನ್ಯಾಸ ನಡೆಯಿತು.

'ಬಿ.ಎಸ್. ಸಣ್ಣಯ್ಯ ಮತ್ತು ಗ್ರಂಥಸಂಪಾದನೆ' ವಿಷಯದ ಮೇಲೆ ಬೆಂಗಳೂರಿನ ಸೈಂಟ್ ಜೋಸೆಫ್ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿಯವರು ವಿಚಾರ ಮಂಡಿಸಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಪ್ರೊ. ಜಿ. ಅಶ್ವತ್ಥನಾರಾಯಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಬಿ.ಎಸ್. ಗುರುಪ್ರಸಾದ್ ವಿವರವಾಗಿ ದತ್ತಿಯ ಅನುಷ್ಠಾನ, ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ಹಾದಿ ಮತ್ತು ದಾನಿಗಳ ಬಯಕೆಗಳನ್ನು ನೀಡಿದರು.

ಇದು ಸಂಯುಕ್ತ ದತ್ತಿಯಾದ್ದರಿಂದ ಸರಣಿಯಂತೆ ಈ ಬಾರಿ ‘ಬಿ.ಎಸ್. ಸಣ್ಣಯ್ಯ ಮತ್ತು ಗ್ರಂಥಸಂಪಾದನೆ’ ವಿಷಯವನ್ನು ಆರಿಸಿಕೊಳ್ಳಲಾಗಿದೆ ಎಂದರು.

ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಸಭೆಯಲ್ಲಿ ಉಪಸ್ಥಿತರಿರುವ ಮತ್ತು ಅಂತರ್ಜಾಲದ ಶ್ರೋತೃಗಳನ್ನು ಆತ್ಮೀಯವಾಗಿ ಸ್ವಾಗತಿಸಿ, ಉಪನ್ಯಾಸಕರಾದ ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿಯವರನ್ನು ಪರಿಚಯಿಸಿದರು.

ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿ ಮಾತನಾಡುತ್ತಾ, ಸಂಶೋಧನೆ ಎಂಬುದು ಒಂದು ಶಿಸ್ತಿನ ಮತ್ತು ಗುರುತ್ವವಾದ ಅಧ್ಯಯನ. ಹಿಂದಿನವರು ಮಾಡುತ್ತಿದ್ದ ರೀತಿಯಲ್ಲಿ ಈಗಲೂ ನಡೆಯಬೇಕು. ಇದರಲ್ಲಿ ಗ್ರಂಥಾಲಯದ ಪಾತ್ರ ಮಹತ್ವವಾದದ್ದು. ಇವತ್ತಿನ ವಿಚಾರ ಮಂಡನೆಯ ವಿಷಯ ‘ಬಿ.ಎಸ್.ಸಣ್ಣಯ್ಯ ಮತ್ತು ಗ್ರಂಥಸಂಪಾದನೆ’. ಅದನ್ನು ನಾನು ಮೂರು ಭಾಗವಾಗಿ ವಿಂಗಡಿಸುತ್ತೇನೆ. ಒಂದು ಹಸ್ತಪ್ರತಿ ಪರಿಶೀಲನೆ. ಎರಡನೆಯದು ಅಧ್ಯಯನ. ಮೂರನೆಯದು ಈ ದಿಶೆಯಲ್ಲಿ ಶ್ರೀ ಬಿ.ಎಸ್. ಸಣ್ಣಯ್ಯನವರ ಪಾತ್ರ. ಅವರ ಗ್ರಂಥ ಸಂಪಾದನಾ ಶಿಸ್ತನ್ನು ಅರಿಯಲು ಎರಡು ಗ್ರಂಥಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಸಣ್ಣಯ್ಯನವರು ಸುಮಾರು ತೊಂಬತ್ತು ಕೃತಿಗಳನ್ನು ರಚಿಸಿ, ಐವತ್ತು ಕೃತಿಗಳ ಸಂಪಾದನೆಯನ್ನು ಮಾಡಿದ್ದಾರೆ. ಪಠ್ಯಗಳ ವಿಮರ್ಶಕರಾಗಿ, ಪಾಶ್ಚಿಮಾತ್ಯ ಮತ್ತು ದೇಶೀಯ ಹಸ್ತಲಿಪಿಗಳ ಸಂರಕ್ಷಕರಾಗಿ ಕಾರ್ಯನಿರ್ವಹಿಸಿದ ಅಗಾಧ ಅನುಭವದ ವ್ಯಕ್ತಿ. ಅವರ ವಿದ್ಯಾಭ್ಯಾಸದ ವಿಷಯ, ನಂತರ ಮಾಡಿದ ಅನೇಕ ಪ್ರಕಾರಗಳ ಹುದ್ದೆಗಳ ನಿರ್ವಹಣೆ, ಅವರಿಗೆ ಗ್ರಂಥ ಸಂಪಾದನೆಗೆ ಸಹಜವಾಗಿ ವೇದಿಕೆಯಾಗಿತ್ತು. ಏಕೆಂದರೆ ಅವು ಕನ್ನಡ ಭಾಷೆ ಮತ್ತು ಗ್ರಂಥಾಲಯಗಳ ನಿರ್ವಹಣೆಗೆ ಪೂರಕವಾಗಿದ್ದವು. ೧೯೯೩ರಿಂದ ೨೦೦೦ದವರೆಗೆ, ನಿವೃತ್ತಿಯ ನಂತರವೂ, ಶ್ರವಣಬೆಳಗೊಳದ ಹಸ್ತಪ್ರತಿ ಮತ್ತು ಪ್ರಾಕೃತ ವಿಭಾಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿ, ಗ್ರಂಥಸಂಪಾದನೆಯಲ್ಲಿ ಮತ್ತಷ್ಟು ಅನುಭವಿಗಳಾದರು. ಕನ್ನಡ, ಪ್ರಾಚೀನ, ಜೈನ ಹೀಗೆ ಅನೇಕ ಸಾಹಿತ್ಯಗಳ ಸಂಪಾದನೆಯಲ್ಲಿ ತೊಡಗಿಸಿಕೊಂಡು ಸಂಪಾದನಾ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿದ ಅನನ್ಯ ವ್ಯಕ್ತಿ ಪ್ರೊ. ಸಣ್ಣಯ್ಯನವರು.

ಇಂದೂ ಸಹ ಹಲವು ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಅಧ್ಯಯನಗಳಲ್ಲಿ ಸಣ್ಣಯ್ಯನವರ ‘ಪಂಪ ಭಾರತ’ ಸಂಪಾದನೆ ಕೃತಿ ಮುಂಚೂಣಿಯಲ್ಲಿ ನಿಲ್ಲುತ್ತದೆ. ಅದೇ ರೀತಿ ‘ರನ್ನನ ಗದಾಯುದ್ಧಂ’ನ ಸಂಪಾದನೆಯ ಶೈಲಿ ಅಪರೂಪವಾದದ್ದು.




ಅವರು ಅಲಭ್ಯವಾದ ಹಸ್ತಲಿಪಿಗಳನ್ನು ಸಂಗ್ರಹಣೆ ಮಾಡಿ, ಅವುಗಳನ್ನು ಸಂರಕ್ಷಿಸುವ ವಿಧಾನಗಳನ್ನು ಹುಟ್ಟುಹಾಕಿ, ಅದಮ್ಯ ಚೇತನದ ವ್ಯಕ್ತಿಯಾಗಿ ನಿಂತದ್ದು, ಅವರ ವಿದ್ವತ್ತು, ಶಿಸ್ತು ಮತ್ತು ಕಾರ್ಯ ಪರಿಪಾಲನೆಯ ಮಾದರಿ ಮುಂದಿನ ಪೀಳಿಗೆಗೆ ದಾರಿದೀಪವಾಗಿ ಬೆಳಗುತ್ತಿರುವುದು ಇಂದಿನ ದತ್ತಿಯಲ್ಲಿ ಪ್ರಜ್ವಲವಾಗುತ್ತಿರುವುದು ಅಗತ್ಯವೂ ಮತ್ತು ಸಣ್ಣಯ್ಯನವರ ಕಾರ್ಯ ಕೌಶಲತೆಯನ್ನು ಸ್ಮರಿಸಿಕೊಳ್ಳುವ ಸುಸಂದರ್ಭವೂ ಆಗಿದೆ ಎಂದರು.

ಪ್ರೊ. ಅಶ್ವತ್ಥನಾರಾಯಣ ಅವರು ಅಧ್ಯಕ್ಷೀಯ ಮಾತುಗಳನ್ನು ಆಡುತ್ತಾ, ಇಂದಿನ ಉಪನ್ಯಾಸಕರಾದ ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿ ‘ಬಿ.ಎಸ್. ಸಣ್ಣಯ್ಯ ಮತ್ತು ಗ್ರಂಥಸಂಪಾದನೆ’ ಕುರಿತು ಬಹಳ ಚೆನ್ನಾಗಿ ಅರಿತು, ನುರಿತು ಹರಿತವಾಗಿ ವಿಷಯಗಳನ್ನು ಮಂಡಿಸಿದ್ದಾರೆ. ಅಭಿನಂದನೆಗಳು. ಪ್ರೊ. ಸಣ್ಣಯ್ಯನವರು ಮಾಡಿರುವ ಗ್ರಂಥ ಸಂಪಾದನೆಯ ಕಾರ್ಯ ವೈವಿಧ್ಯಮಯ ಹಾಗೂ ವಿಶಿಷ್ಟವಾದದ್ದು. ಇವರ ಜೊತೆಗೆ ಕಿಟ್ಟೆಲ್ ಅವರನ್ನು ನೆನಪಿಸಿಕೊಳ್ಳಬೇಕು. ಅವರೂ ಉತ್ತಮವಾದ ಸೇವೆಯನ್ನು ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ಸಲ್ಲಿಸಿದ್ದಾರೆ. ಹಾಗೇ ಈ ಹಾದಿಯಲ್ಲಿ ಹೆಜ್ಜೆ ಹಾಕಿದ ಬಹಳಷ್ಟು ಗ್ರಂಥ ಸಂಪಾದಕರನ್ನು ಪ್ರೊ. ಅಶ್ವತ್ಥನಾರಾಯಣ ಹೆಸರಿಸಿದರು. ಪ್ರೊ. ಸಣ್ಣಯ್ಯನವರ ‘ನೇಮಿನಾಥ ಪುರಾಣ’ದ ಗ್ರಂಥ ಸಂಪಾದನೆಯನ್ನು ಬಹು ಮುಖ್ಯವಾಗಿ ಉಲ್ಲೇಖಿಸಿದರು. ಆಯುರ್ವೇದ ಕ್ಷೇತ್ರಕ್ಕೆ ಸಂಬಂಧಿಸಿದ ಗ್ರಂಥ ಸಂಪಾದನೆಯನ್ನೂ ಪ್ರೊ. ಸಣ್ಣಯ್ಯನವರು ಮಾಡಿರುವುದು ವಿಶೇಷ ಎಂದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀಮತಿ ಎಸ್.ಜಿ. ಮಾಲತಿ ಶೆಟ್ಟಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

**ಜುಲೈ ೨೬ ಭಾನುವಾರ ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ಷಿಕ ಮಹಾಸಭೆ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಚುನಾವಣೆ ಇರುತ್ತದೆ**

## ದಿನಾಂಕ ೦೯/೦೫/೨೦೨೬ ಶನಿವಾರ ಎಂ. ತಿಮ್ಮಯ್ಯ ಅವರು ಸ್ಥಾಪಿಸಿರುವ ‘ಡಾ. ಎಂ. ಚಿದಾನಂದಮೂರ್ತಿ ದತ್ತಿ’ ಉಪನ್ಯಾಸದಲ್ಲಿ ಸೈಂಟ್ ಫ್ರಾನ್ಸಿಸ್ ಕಾಲೇಜ್, ಕೋರಮಂಗಲ, ಬೆಂಗಳೂರು ಇಲ್ಲಿನ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಸೂರ್ಯಕೀರ್ತಿ ‘ಕನ್ನಡ ಚಳವಳಿ ಮತ್ತು ಡಾ. ಎಂ. ಚಿದಾನಂದಮೂರ್ತಿ’ ವಿಷಯ ಕುರಿತು ವಿಚಾರ ಮಂಡಿಸಿದರು. ಡಾ. ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಬಿ.ಎಸ್. ಗುರುಪ್ರಸಾದ್ ದತ್ತಿಯ ಸ್ಥಾಪನೆಯಿಂದ ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ಹಾದಿ ಮತ್ತು ದಾನಿಗಳ ಉದ್ದೇಶವನ್ನು ವಿವರವಾಗಿ ಪರಿಚಯಿಸಿದರು.

ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ವೇದಿಕೆಯ ಮೇಲಿರುವ ಗಣ್ಯರನ್ನು, ಸಭೆಯಲ್ಲಿ ಉಪಸ್ಥಿತರಿರುವ ಮತ್ತು ಅಂತರ್ಜಾಲದ ಶ್ರೋತೃಗಳನ್ನು ಆತ್ಮೀಯವಾಗಿ ಸ್ವಾಗತಿಸಿ, ಇಂದಿನ ಉಪನ್ಯಾಸಕರಾದ ಪ್ರೊ. ಸೂರ್ಯಕೀರ್ತಿಯವರನ್ನು ಸಭಿಕರಿಗೆ ಪರಿಚಯಿಸಿದರು.

ಹಿಂದೆ ಕನ್ನಡ ಮಾಧ್ಯಮವನ್ನು ಹತ್ತಿಕ್ಕಿ ಇಂಗ್ಲಿಷ್ ಭಾಷಾ ಮಾಧ್ಯಮವೇ ಮುನ್ನೆಲೆಯಲ್ಲಿ ಇತ್ತು. ಶಿಕ್ಷಣ ಕ್ಷೇತ್ರ ಹಾಗೂ ಆಡಳಿತ ಕನ್ನಡಕ್ಕೆ ನೀಡಬೇಕಾದ ಮಹತ್ವವನ್ನು ನೀಡಿರಲಿಲ್ಲ. ಭಾಷೆಯ ಆಧಾರದ ಮೇಲೆ ರಾಜ್ಯಗಳ ವಿಂಗಡಣೆ ಆದರೂ, ಅನ್ಯ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ಹಿಂದುಳಿಯಿತು. ‘ನಾಡು ಮತ್ತು ನುಡಿ’ ಎಂಬ ಅಭಿಮಾನದ ವಾಕ್ಯ ಕೇವಲ ಫಲಕಗಳ ಮೇಲೆ ರಾರಾಜಿಸಿದರೂ, ಬಳಕೆಯಲ್ಲಿ ಅಪಹಾಸ್ಯಕ್ಕೆ ಗುರಿಯಾಯಿತು. ಇಂತಹ ಸಂದರ್ಭದಲ್ಲಿ ಕನ್ನಡಪರ ತೀವ್ರ ಚಳವಳಿಗಳ ಅವಶ್ಯಕತೆ ಅನಿವಾರ್ಯವಾಯಿತು. ಇಂತಹ ಚಳವಳಿಗಳಲ್ಲಿ ಕಾಯಾ ವಾಚಾ ಮನಸಾ ಧುಮ್ಮಿಕ್ಕಿದವರಲ್ಲಿ ಡಾ. ಚಿದಾನಂದಮೂರ್ತಿ ಒಬ್ಬರು.

ಮೊದಲ ಹೆಜ್ಜೆ ಎಂದರೆ ಕರ್ನಾಟಕದ ಏಕೀಕರಣ. ನಂತರ ಬಂದದ್ದು ಸಾಂಸ್ಕೃತಿಕ ಚಳವಳಿ. ಇವುಗಳಲ್ಲಿ ಚಿದಾನಂದಮೂರ್ತಿಯವರ ನಿಲುವಿನಲ್ಲಿ ಕನ್ನಡದ ಅಸ್ಮಿತೆ ಪ್ರಮುಖ. ನಂತರ ಕನ್ನಡಿಗರಲ್ಲಿ ಭಾಷಾ ಪ್ರೀತಿ ಹುಟ್ಟಿಸುವುದು. ತದನಂತರ ಕನ್ನಡದ ಉಳಿವು. ಹೀಗೆ ಅನೇಕ ವೃತ್ತಾಂತಗಳನ್ನು ನೀಡಿ, ‘ಕನ್ನಡ ಚಳವಳಿ ಮತ್ತು ಡಾ. ಚಿದಾನಂದಮೂರ್ತಿ’, ಅವರ ಹುಟ್ಟುಹಬ್ಬದ ಸಮಯದಲ್ಲಿ ನೆನಪಿಸಿಕೊಳ್ಳುವ ಅಗತ್ಯತೆಯನ್ನು ಅನೇಕ ಘಟನೆಗಳ ಮೂಲಕ ಮೆಲುಕು ಹಾಕಿದರು. ಇದರ ಜೊತೆಗೆ, ಅಂದಿನ ದಿನಗಳಲ್ಲಿ ಕನ್ನಡದ ಕಾರ್ಯಕರ್ತರನ್ನು ಬೆಳೆಸಿ, ಹುರಿದುಂಬಿಸಿ, ಹಳಗನ್ನಡದ ಮಹತ್ವವನ್ನು ಎತ್ತಿ ತೋರಿಸುತ್ತಾ ಸಂಘಗಳನ್ನು ಪ್ರಾರಂಭಿಸಿದ ಅವರ ಮಹತ್ಕಾರ್ಯ ಚಿರಸ್ಮರಣೆಯಲ್ಲಿ ಉಳಿಯುವಂತಹದ್ದು ಎಂದರು.

ನಂತರ ಕೆಲವು ಸಭಿಕರು ಡಾ. ಚಿದಾನಂದಮೂರ್ತಿಯವರ ಕನ್ನಡ ಪರ ಹೋರಾಟದಲ್ಲಿ ತಾವು ಕಂಡ, ಉಂಡ ಅನೇಕ ಅನುಭವಗಳನ್ನು ಹಂಚಿಕೊಂಡರು.

ದತ್ತಿ ದಾನಿಗಳಾದ ಎಂ. ತಿಮ್ಮಯ್ಯ, ನೋಡಲು ಕಿರಿಯರಂತೆ ಕಾಣುವ ಸೂರ್ಯಕೀರ್ತಿ ಇಂದು ಬಹಳಷ್ಟು ವಿಷಯಗಳನ್ನು ಸಂಗ್ರಹಿಸಿ, ಚಿದಾನಂದಮೂರ್ತಿ ಕನ್ನಡ ಚಳವಳಿಯ ಮೌಲ್ಯವನ್ನು ಹೇಗೆ ಭದ್ರಗೊಳಿಸಿದರು ಮತ್ತು ಅದಕ್ಕೆ ಒಂದು ವಿಶೇಷವಾದ ನೆಲೆಯನ್ನು ನಿರ್ಮಾಣ ಮಾಡಿದರು ಎಂಬುದನ್ನು ಅನೇಕ ಉದಾಹರಣೆಗಳೊಂದಿಗೆ ನಮ್ಮ ಮುಂದೆ ಇಟ್ಟಿದ್ದಾರೆ ಎನ್ನುತ್ತಾ ಅವರನ್ನು ಅಭಿನಂದಿಸಿದರು.

ಅಧ್ಯಕ್ಷೀಯ ನುಡಿಗಳನ್ನು ಆಡಿದ ಡಾ. ಬೈರಮಂಗಲ





ರಾಮೇಗೌಡ, ಚಿದಾನಂದಮೂರ್ತಿಯವರ ಮುಂದಾಲೋಚನೆಯನ್ನು ಶ್ಲಾಘಿಸಿದರು. ಅಂದಿನ ದಿನಗಳ ಪರಿಸ್ಥಿತಿಯನ್ನು ಮತ್ತು ಕನ್ನಡದ ಉಳಿಗಾಲಕ್ಕೆ ಆಸಕ್ತಿ ತೋರದ ಜನರನ್ನು ಕಂಡ ಚಿದಾನಂದಮೂರ್ತಿ ಹೋರಾಟ ಮಾಡದಿರುವ, ಅಂದರೆ 'ಸತ್ತಂತಿರುವವರ ಬಡಿದೆಬ್ಬಿಸಿ' ಎಂಬುದನ್ನು ಗ್ರಹಿಸಿ ಮೊಳಕೆಯ ರೂಪದಲ್ಲಿದ್ದ ಕನ್ನಡಪರ ಚಳವಳಿಗೆ ನೂತನ ಚೈತನ್ಯವವನ್ನು ತುಂಬಿದ ಮಹಾನುಭಾವರು. ಕರ್ನಾಟಕ ರಾಜ್ಯವನ್ನು ಆಳುವ ಸರಕಾರದ ಶಾಸಕರು, ಮಂತ್ರಿಗಳೇ ದೊಡ್ಡ ಬಂಡವಾಳ ಹಾಕಿ ಇಂಗ್ಲಿಷ್ ಶಾಲೆಗಳನ್ನು ತಾವೇ ಹುಟ್ಟುಹಾಕಿ, ಅದನ್ನು ವಾಣಿಜ್ಯ ರೂಪದಲ್ಲಿ ಬೆಳೆಸಿಕೊಂಡು ಬರುತ್ತಿರುವುದು ಕನ್ನಡದ ಅಸ್ತಿತ್ವಕ್ಕೆ ಹಾಕುತ್ತಿರುವ ಕೊಡಲಿಯ ಪೆಟ್ಟು ಅನ್ನಬಹುದು. ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಚಳವಳಿಗಳು ಅಂದೂ ಇಂದೂ ಮತ್ತು ಮುಂದೂ ಪ್ರಸ್ತುತ ಎನ್ನುತ್ತಾ, ಸ್ಫೂರ್ತಿದಾಯಕ ಉಪನ್ಯಾಸವನ್ನು ನೀಡಿದ ಪ್ರೊ. ಸೂರ್ಯಕೀರ್ತಿ ಹಾಗೂ ದತ್ತಿಯನ್ನು ನೀಡಿದ ಎಂ. ತಿಮ್ಮಯ್ಯ ಮತ್ತು ಅವರನ್ನು ಪ್ರಶಂಸಿಸಿದರು.

ಜೊತೆಗೆ ಇತ್ತೀಚಿನ ದಿನಗಳಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನವು ಕೇವಲ ಉಪನ್ಯಾಸಗಳನ್ನು ಏರ್ಪಡಿಸುವುದು ಮಾತ್ರವಲ್ಲದೆ, ತದನಂತರ ನಡೆಸಬಹುದಾದ 'ಸಂವಾದ'ಕ್ಕೂ ಹೆಚ್ಚು ಗಮನ ಕೊಡುತ್ತಿದೆ ಅನ್ನುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಎಸ್.ಜಿ. ಮಾಲತಿ ಶೆಟ್ಟಿ ಅವರು ವಂದನಾರ್ಪಣೆ ಮಾಡಿದರು.

## ೨೩.೦೫.೨೦೨೬ ಸಂಜೆ ೪.೩೦ – ಬಿ.ಎಂ.ಶ್ರೀ. ಪ್ರತಿಷ್ಠಾನ ಮತ್ತು ನಾದೋಪಾಸನ ಸಂಗೀತ ವಿದ್ಯಾಲಯ ಸಂಸ್ಥೆಗಳ ಸಹಯೋಗದಲ್ಲಿ 'ಚಾರು ವಸಂತ' ಕಾವ್ಯ ಪ್ರಸ್ತುತಿ ಕಾರ್ಯಕ್ರಮ

## ಕಾವ್ಯವಾಚನ ಮತ್ತು ವ್ಯಾಖ್ಯಾನ : ವಿದುಷಿ ಡಾ. ಶ್ಯಾಮಲಾ ಪ್ರಕಾಶ್

## ಗೌರವ ಉಪಸ್ಥಿತಿ : ಆಚಾರ್ಯ ಹಂಪನಾ, ಡಾ. ಬೈರಮಂಗಲ ರಾಮೇಗೌಡ

ನಾದೋಪಾಸನ ಸಂಗೀತ ವಿದ್ಯಾಲಯ, ಬೆಂಗಳೂರು ಇವರ ಸಹಯೋಗದಲ್ಲಿ ಪ್ರತಿಷ್ಠಾನವು ಆಯೋಜಿಸಿದ ಕಾರ್ಯಕ್ರಮವು ಸಂಗೀತಾಸಕ್ತ ಮತ್ತು ಗಮಕಾಸಕ್ತ ರಸಿಕರಿಗೆ ಮೆಚ್ಚುಗೆಯಾಗುವಂತೆ ನಾಡೋಜ ಡಾ. ಹಂಪ ನಾಗರಾಜಯ್ಯ ಅವರ 'ಚಾರು ವಸಂತ' ಕಾವ್ಯವನ್ನು ಪ್ರಸ್ತುತ ಪಡಿಸಲಾಯಿತು. ಒಂದು ಕಡೆ ಹಂಪನಾರಿಗೆ ಧನ್ಯತಾ ಭಾವ ಉಂಟಾದರೆ ಮತ್ತೊಂದೆಡೆ ಚಾರು ವಸಂತ ಕಾವ್ಯದ ಗಮಕ ಮತ್ತು ವ್ಯಾಖ್ಯಾನವನ್ನು ಒಬ್ಬರೇ ನಿರ್ವಹಿಸಿದ ವಿದುಷಿ ಡಾ.ಶ್ಯಾಮಲಾ ಪ್ರಕಾಶ್ ಅವರ ಪ್ರತಿಭಾ ಪ್ರಕಾಶನದಿಂದ ಪ್ರೇಕ್ಷಕರು ಮೂಕವಿಸ್ಮಿತರಾದರು. ವಿದುಷಿ ಡಾ. ಶ್ಯಾಮಲಾ ಪ್ರಕಾಶ್ ಅವರು ಪ್ರತಿಷ್ಠಾನದಲ್ಲಿ ಹಳಗನ್ನಡ ಉಪನ್ಯಾಸಕರು. ಸಂಗೀತ ಸಾಹಿತ್ಯ ಎರಡರಲ್ಲೂ ವಿದ್ವತ್ತನ್ನು ಸಂಪಾದಿಸಿಕೊಂಡವರು. ಹಂಪನಾ ಅವರ ಚಾರು ವಸಂತ ಕಾವ್ಯವು ಶ್ಯಾಮಲಾ ಅವರ ಗಮನಕ್ಕೆ ಬಂದಿದ್ದು ಮುಂಬೈಯಲ್ಲಿದ್ದಾಗ. ಚಾರು ವಸಂತದ ಮಹತ್ವ ತಿಳಿದಾಗಿನಿಂದಲೇ ಅದರ ವಾಚನ–ವ್ಯಾಖ್ಯಾನ ಮಾಡುವ ಬಯಕೆ. ಬೆಂಗಳೂರಿಗೆ ಬಂದ ನಂತರ ತಾವೇ ಈ ಕಾವ್ಯವನ್ನು ವಾಚಿಸಿ, ವ್ಯಾಖ್ಯಾನವನ್ನು ನಡೆಸಿಕೊಡುವುದಾಗಿ ಹಂಪನಾ ಅವರಲ್ಲಿ ಮನವಿ ಸಲ್ಲಿಸಿದರು. 'ಚಾರು ವಸಂತ' ಕಾವ್ಯವನ್ನು ಸಂಗೀತಾಸಕ್ತರ ಗಮನಕ್ಕೆ ತರುವ ಹಲವಾರು ದಾರಿಗಳನ್ನು ಅನ್ವೇಷಿಸುತ್ತಿದ್ದ ಹಂಪನಾ ಅವರಿಗೆ ಶ್ಯಾಮಲಾ ಅವರ ಮನವಿಯಿಂದ ನಿಧಿ ಸಿಕ್ಕಷ್ಟೇ ಸಂತೋಷವಾಯಿತು. ಕಾವ್ಯಪ್ರಸ್ತುತಿ ಮಾಡಲು ಸಂತೋಷದಿಂದ ಒಪ್ಪಿಗೆ ಕೊಟ್ಟರು. ಸೊಗಸಾಗಿ ಕಾವ್ಯ ಪ್ರಸ್ತುತಿ ಮಾಡಿದ ಶ್ಯಾಮಲಾ ಪ್ರಕಾಶ್ ಅವರ ಬಗೆಗೆ ಅಭಿಮಾನದಿಂದ ಮಾತನಾಡಿದ ಹಂಪನಾ "ಚಾರು ವಸಂತ ಕಾವ್ಯ ಬರೆದಾಗ ಇದು ಜನಮನವನ್ನು ಹೇಗೆ ಮುಟ್ಟುವುದೆನ್ನುವ ಕಲ್ಪನೆ ಇರಲಿಲ್ಲ. ಕನ್ನಡದ ವಿಮರ್ಶಕರು ಕಾವ್ಯದ ಮೌಲ್ಯವನ್ನು ಜನರಿಗೆ ಪರಿಚಯಿಸಿದರು. ಕಾವ್ಯ ಮತ್ತೆ ಮತ್ತೆ ಮುದ್ರಣ ಭಾಗ್ಯ ಕಂಡಿತು. ವಿದೇಶಿ ಮತ್ತು ಭಾರತೀಯ ಭಾಷೆಗಳನ್ನು ಸೇರಿ ೨೦ ಭಾಷೆಗಳಿಗೆ ಅನುವಾದವಾಯಿತು. ನಾಟಕ ರೂಪದಲ್ಲಿ ಪ್ರೇಕ್ಷಕರನ್ನು ಸೆಳೆಯಿತು. ಪುಸ್ತಕ ಓದುವ, ನಾಟಕ ನೋಡುವ ಅನುಭವಕ್ಕಿಂತ ವಾಚನ ವ್ಯಾಖ್ಯಾನದ ಸ್ವರೂಪ ಬೇರೆ. ಇವತ್ತು ೯೦ ನಿಮಿಷಗಳ ಕಾಲ ವಿದುಷಿ ಶ್ಯಾಮಲಾ ಪ್ರಕಾಶ್ ದಣಿವರಿಯದೆ ವಾಚನ–ವ್ಯಾಖ್ಯಾನದ ಮೂಲಕ ರಸಪೂರ್ಣವಾಗಿ ಕಾವ್ಯ ಪ್ರಸ್ತುತಿ ಮಾಡಿದ್ದು ನನಗೆ ಅತೀವ ಸಂತೋಷ ಉಂಟುಮಾಡಿದೆ" ಎಂದು ಕೇಳಿದರು.






## ೨೮ ಮೇ ೨೦೨೬ ಸಂಜೆ ೫ ಗಂಟೆ –
## ವೈಯಾಕರಣಿ ಗರಣಿ ಕೃಷ್ಣಾಚಾರ್ಯ ದತ್ತಿ ಉಪನ್ಯಾಸ
## ವಿಷಯ : ೨ನೇ ನಾಗವರ್ಮನ ವ್ಯಾಕರಣಗಳು

ಕಾರ್ಯಕ್ರಮದ ಪ್ರಾರಂಭದಲ್ಲಿ ಹಸ್ತಪ್ರತಿ ಸಂಯೋಜಕರಾದ ಬಿ.ಎಸ್. ಗುರುಪ್ರಸಾದ್ ಅವರು ದತ್ತಿನಿಧಿಯ ಪರಿಚಯವನ್ನು ಹಾಗೂ ಗರಣಿ ಕೃಷ್ಣಾಚಾರ್ಯರ ವ್ಯಕ್ತಿ ವಿವರಗಳನ್ನು ಸಭೆಗೆ ತಿಳಿಸಿದರು. ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಗರಣಿ ಎಂಬ ಹಳ್ಳಿಯಲ್ಲಿ ೧೮೫೭ರಲ್ಲಿ ಜನಿಸಿ ೧೯೧೮ರಲ್ಲಿ ನಿಧನರಾದರು. ಇವರು ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯ ಗಳಿಸಿ, ಮೈಸೂರು ಮಹಾರಾಜರ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದರು. ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಯೂ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ್ದಾರೆ.

೨೦೧೬ರಲ್ಲಿ ಇವರ ಮೊಮ್ಮಗಳಾದ ಡಾ. ಟಿ.ಜಿ. ಸತ್ಯವತಿಯವರು ತಮ್ಮ ಮಕ್ಕಳೊಂದಿಗೆ ಸೇರಿ ಪ್ರತಿಷ್ಠಾನದಲ್ಲಿ, ತಮ್ಮ ಅಜ್ಜಂದಿರ ಹೆಸರಿನಲ್ಲಿ ದತ್ತಿ ನಿಧಿಯೊಂದನ್ನು ಸ್ಥಾಪಿಸಿ, ಪ್ರತಿವರ್ಷ ಸಾಹಿತ್ಯ ಸಂಬಂಧಿ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಗರಣಿ ಕೃಷ್ಣಾಚಾರ್ಯ ಅವರನ್ನು ಕನ್ನಡ ಸಾರಸ್ವತ ಲೋಕವು ನೆನಪಿಸಿಕೊಳ್ಳುವ ಸದುದ್ದೇಶದಿಂದ ಈ ದತ್ತಿಯನ್ನು ಅಸ್ತಿತ್ವಕ್ಕೆ ತಂದರು. ಇಂದಿನದು ದತ್ತಿನಿಧಿಯ ೧೦ನೇ ವರ್ಷದ ಕಾರ್ಯಕ್ರಮವಾಗಿದೆ.

ಡಾ. ಟಿ.ಜಿ. ಸತ್ಯವತಿಯವರು ಐ.ಸಿ.ಎಂ.ಆರ್. ಸಂಸ್ಥೆಯ ಮಹಾನಿರ್ದೇಶಕರಾಗಿ ಸೇವೆಸಲ್ಲಿಸಿ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ. ಇಂದಿನ ಕಾರ್ಯಕ್ರಮಕ್ಕೆ ಇವರ ಕುಟುಂಬದವರಾದ ಶ್ರೀ ಬಾಟ್ನಿ ಶ್ರೀನಿವಾಸ್ ಅವರು ಹಾಜರಿದ್ದರು.

ಇಂದಿನ ಉಪನ್ಯಾಸಕ್ಕೆ ಡಾ. ಕೆ.ಆರ್. ಗಣೇಶ್ ಅವರು ಪಿಪಿಟಿ ಮೂಲಕ, ತಮ್ಮ ಸುಪುತ್ರಿ ಕುಮಾರಿ ಗೀತಾ ಕೈದಾಳ ಅವರ ನೆರವನ್ನು ಪಡೆದು ಉಪನ್ಯಾಸವನ್ನು ಸೊಗಸಾಗಿ ನಡೆಸಿಕೊಟ್ಟರು. ಪ್ರಾರಂಭದಲ್ಲಿ ಕವಿಯ ಕಾಲ (೧೦೪೨), ಅವನ 'ಶಬ್ದಸ್ಮೃತಿ' ಮತ್ತು 'ಕರ್ನಾಟಕ ಭಾಷಾ ಭೂಷಣ'ದ ವಿವರಗಳನ್ನು ನೀಡಿದರು. ಕನ್ನಡ ಭಾಷೆಗೆ ಸುಮಾರು ೩೦೦೦ ವರ್ಷಗಳ ಇತಿಹಾಸವಿದ್ದರೂ ವ್ಯಾಕರಣ ಗ್ರಂಥದ ರಚನೆಯು ಸ್ವಲ್ಪ ತಡವಾಯಿತೆನ್ನಬಹುದು ಎಂದು ಉಲ್ಲೇಖಿಸುತ್ತಾ ನಾಗವರ್ಮನ ವ್ಯಾಕರಣ ಗ್ರಂಥಗಳ ಮಹತ್ವವನ್ನು ವಿವರಿಸಿ ನಂತರದ ಕನ್ನಡ ವ್ಯಾಕರಣಗಳ ಮೇಲೆ ಉಂಟಾದ ಪ್ರೇರಣೆ ಮತ್ತು ಪ್ರಭಾವವನ್ನು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಬೈರಮಂಗಲ ರಾಮೇಗೌಡ "ಪ್ರೌಢಶಾಲಾ ಹಂತದಲ್ಲಿ ವ್ಯಾಕರಣವನ್ನು ಯಾರು ಚೆನ್ನಾಗಿ ಕಲಿಯುವುದಿಲ್ಲವೋ ಅವರು ಒಳ್ಳೆಯ ಮಾತುಗಾರರಾಗಲು, ಒಳ್ಳೆಯ ಸಾಹಿತಿಯಾಗಲು ಸಾಧ್ಯವಿಲ್ಲ" ಎಂದು ಹೇಳಿ ವ್ಯಾಕರಣದ ಮಹತ್ವವನ್ನು ಸ್ಪಷ್ಟಪಡಿಸಿದರು.







# ರಾಷ್ಟ್ರ ಕವಿ ಜಿ.ಎಸ್. ಶಿವರುದ್ರಪ್ಪನವರ ಜನ್ಮ ಶತಮಾನೋತ್ಸವ ವರ್ಷದ ವಿಶೇಷ ಲೇಖನ

ಡಾ. ಬೈರಮಂಗಲ ರಾಮೇಗೌಡ

## ಮೋಡಿ ಮಾಡಿದ ಮೇಷ್ಟ್ರು

..ಮುಂದುವರಿದ ಭಾಗ

ಅವುಗಳನ್ನು ಮತ್ತಷ್ಟು ಹೊಳಪುಗೊಳಿಸುವಂಥ ಮುಕ್ತ ಮನಸ್ಸಿನ ಚರ್ಚೆಗಳು ಸೆನೆಟ್ ಸಭಾಂಗಣ ಬಿಸಿಯೇರುವಂತೆ, ಕೋಲಾಹಲಗೊಳ್ಳುವಂತೆ ಮಾಡುತ್ತಿದ್ದವು. ಆ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳು ಅಲ್ಲಿ ನಡೆದ ಚರ್ಚೆಯ ಸಾರವನ್ನು ಹೀರಿ ಪುಷ್ಟಗೊಂಡು ಮುಂದಿನ ವರ್ಷದ ಮತ್ತೊಂದು ವಿಚಾರ ಸಂಕಿರಣದ ಹೊತ್ತಿಗೆ ಪುಸ್ತಕ ರೂಪ ಧರಿಸಿ ಬಿಡುಗಡೆಗೊಳ್ಳುತ್ತಿದ್ದವು. ಆ ಪುಸ್ತಕಗಳು ಈಗಲೂ ಕನ್ನಡ ಸಾಹಿತ್ಯದ ಬೆಳವಣಿಗೆಗೆ ದಿಕ್ಸೂಚಿಯಾಗಿ, ಆಕರ ಗ್ರಂಥಗಳಾಗಿ ನಿಂತಿರುವುದು ಅವುಗಳ ಮೌಲಿಕತೆಯನ್ನು ಸ್ಪಷ್ಟಪಡಿಸುತ್ತದೆ. ಇದರಿಂದ ಶಿವರುದ್ರಪ್ಪನವರು ಪೌರ್ವಾತ್ಯ–ಪಾಶ್ಚಾತ್ಯ ವಿಮರ್ಶೆಯ ನೆಲೆಬೆಲೆಗಳನ್ನು ಚೆನ್ನಾಗಿ ಅರಗಿಸಿಕೊಂಡು ಅವುಗಳ ಬೆಳಕಿನಲ್ಲಿ ಹೊಸ ಬಗೆಯ ಸಾಹಿತ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಸಾಮರ್ಥ್ಯ ಹೊಂದಿದವರಾಗಿ, ಹಳೆ ಬೇರು ಹೊಸ ಚಿಗುರಿನ ಸಾಹಿತ್ಯಕ್ಕೆ ಸೇತುವೆ ಕಟ್ಟಿ ಸಂಚಾರವನ್ನು ಸುಗಮಗೊಳಿಸುವವರಾಗಿ, ಕನ್ನಡ ವಿಮರ್ಶಾ ಕ್ಷೇತ್ರದ ದಿಗಂತಗಳನ್ನು ವಿಸ್ತಾರಕ್ಕೊಯ್ಯಲು ಟೊಂಕ ಕಟ್ಟಿ ನಿಂತ ಸಾಧಕರಾಗಿ ಕಂಡುಬರುತ್ತಾರೆ. ಇದು ಅವರ ಸರಳ ಜೀವನ, ಪ್ರತಿಭೆ–ಪಾಂಡಿತ್ಯಗಳ ಸಾಮರಸ್ಯದ ವ್ಯಕ್ತಿತ್ವ, ಪ್ರಗತಿಪರವಾದ ಸಮನ್ವಯ ದೃಷ್ಟಿ ಇವುಗಳಿಂದ ಸಾಧ್ಯವಾದದ್ದು.

ಹೃದಯಸಂಪನ್ನತೆಗೆ ಹೆಸರಾದ ಶಿವರುದ್ರಪ್ಪನವರು ಅಧ್ಯಾಪಕರಾಗಿ, ಆಡಳಿತಗಾರರಾಗಿ, ವಿಮರ್ಶಕ–ಕವಿಯಾಗಿ ಪಡೆದ ಮುಪ್ಪುರಿಯ ಯಶಸ್ಸಿಗೆ ಅವರು ಬಳಸುತ್ತಿದ್ದ ಭಾಷೆಯೂ ಕಾರಣವಾಗಿದ್ದಿರಬಹುದು. ಅವರು ಪಾಠ ಮಾಡುತ್ತಿದ್ದಾಗಲೂ ಭಾಷಣ ಮಾಡುವಾಗಲೂ ಚರ್ಚೆಯಲ್ಲಿ ತೊಡಗಿರುವಾಗಲೂ ಬರೆಯುವಾಗಲೂ ಬಳಸುವ ಭಾಷೆ ಬಹು ಹದವಾದದ್ದು. ಅದು ಎಲ್ಲೂ ರೂಕ್ಷವಾಗದೆ ಚಿತ್ತವಿಕಾರಗಳನ್ನು ಕಾರದೆ ಆಲೋಚನಾಪೂರ್ಣವಾದ ವಿವೇಚನಾಶೀಲ ಮನೋವಿಲಾಸವನ್ನು ತೋರುವಂಥದ್ದು, ಸಂಯಮದಲ್ಲೇ ಸಾಗುವಂಥದ್ದು. ಸರಳತೆ, ಸೌಹಾರ್ದತೆ, ಆತ್ಮೀಯತೆ, ಸೌಮ್ಯತೆ, ಅಪರೂಪದ ಹಾಸ್ಯಪ್ರವೃತ್ತಿ ಇವುಗಳಿಂದಾಗಿ ಬಹುಮಟ್ಟಿಗೆ ಅವರು 'ಶಿವ'ನಾಗಿಯೇ ಕಾಣಿಸಿಕೊಂಡಿದ್ದರೂ ಒಮ್ಮೊಮ್ಮೆ ಕೆಲಸಗಳ ಒತ್ತಡ, ಮನಸ್ಸಿನ ಕಿರಿಕಿರಿಯಿಂದಾಗಿ 'ರುದ್ರ' ಸ್ವರೂಪವನ್ನೂ ಪ್ರಕಟಿಸಿರುವುದುಂಟು. ನಾಡಿನ ದುಸ್ಥಿತಿಯನ್ನೂ ಜನತೆಯ ನಿರಭಿಮಾನವನ್ನೂ ಕುರಿತು ಬೇಸರಗೊಳ್ಳುತ್ತಿದ್ದ ಜಿ.ಎಸ್.ಎಸ್. ವ್ಯಗ್ರರಾಗಿ ಕಿಡಿನುಡಿಗಳನ್ನುದುರಿಸಿರುವುದೂ ಉಂಟು. 'ಧರ್ಮರಾಯ ಧನುಸ್ಸು ತೆಗೆದುಕೊಂಡಂತೆ' ಕೋಮಲ ಮನಸ್ಸಿನ ಸಾತ್ವಿಕ ಜೀವಿಗಳಿಗೆ ಇದು ಸಹಜವೂ ಇರಬಹುದು. ಶೋಷಣೆ, ಭ್ರಷ್ಟಾಚಾರ, ನೀತಿಹೀನ ರಾಜಕೀಯದ ವಿರುದ್ಧ ಸಿಡಿದು ಸಾತ್ವಿಕ ಸಂತಾಪದಿಂದ ಜಿ.ಎಸ್.ಎಸ್. ಆಕ್ರೋಶ ವ್ಯಕ್ತಪಡಿಸಿರುವ ಹಲವು ಉದಾಹರಣೆಗಳು ನಮ್ಮೆದುರಿಗಿವೆ.

ನಾನು ಸೀನಿಯರ್ ಎಂ.ಎ. ತರಗತಿಯಲ್ಲಿದ್ದಾಗ ಕರ್ನಾಟಕ ಸಂಘದ ಅಧ್ಯಕ್ಷನಾಗಿ ಜಿಎಸ್ಎಸ್ ಅವರನ್ನು ಸಮೀಪದಿಂದ ನೋಡುವ, ಅರ್ಥಮಾಡಿಕೊಳ್ಳುವ ಅವಕಾಶ ಪಡೆದುಕೊಂಡಿದ್ದೆ. ಆಗ ಜಿ.ಪಿ. ರಾಜರತ್ನಂ, ಬಿ.ಸಿ. ರಾಮಚಂದ್ರಶರ್ಮ, ಕೆ.ಎಸ್. ನರಸಿಂಹಸ್ವಾಮಿ, ಪಿ. ಲಂಕೇಶ್ ಮುಂತಾದವರನ್ನು ಕಾರ್ಯಕ್ರಮಗಳಿಗೆ ಆಹ್ವಾನಿಸಿ ಅವರೊಡನಾಡುವ, ವಿಚಾರ ವಿನಿಮಯ ಮಾಡಿಕೊಳ್ಳುವ ಸದವಕಾಶವನ್ನು ಜಿ.ಎಸ್.ಎಸ್. ಕಲ್ಪಿಸಿಕೊಟ್ಟಿದ್ದರು. ಸಂಘದ ಚಟುವಟಿಕೆಗಳಲ್ಲಿ ಶಿಸ್ತು, ಅಚ್ಚುಕಟ್ಟುತನ, ಕ್ರಮಬದ್ಧತೆ, ಕ್ಷಿಪ್ರತೆಗಳನ್ನು ಅವರು ಬಯಸುತ್ತಿದ್ದರು. ಯಾವುದಕ್ಕೂ ಅತಿಯಾಗಿ ಅಂಟಿಕೊಳ್ಳದ, ಪರಿಸ್ಥಿತಿಯೊಂದಿಗೆ ಮನಸ್ಸಿನ ವಿರುದ್ಧವಾಗಿ ರಾಜಿ ಮಾಡಿಕೊಳ್ಳಲು ಒಪ್ಪದ ಅವರು ಯೋಜಿತ ರೀತಿಯಲ್ಲಿ ಕೆಲಸಗಳು ನಡೆಯದಿದ್ದಾಗ ಆತಂಕ ಕಳವಳಗಳಲ್ಲಿ ಚಡಪಡಿಸುತ್ತ ರೇಗುವುದಕ್ಕೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಪ್ರಾಮಾಣಿಕತೆ, ಸತ್ಯನಿಷ್ಠೆ, ಘನತೆ, ನ್ಯಾಯನಿಷ್ಠುರತೆ, ನಿರ್ದಾಕ್ಷಿಣ್ಯ ಪ್ರವೃತ್ತಿಗಳಿಂದ ಕುತೂಹಲವನ್ನೂ ಅಚ್ಚರಿಯನ್ನೂ ಉಂಟುಮಾಡಿ ನಮಗೇ ಗೊತ್ತಿಲ್ಲದಂತೆ ನಮ್ಮನ್ನು ಋಜುಮಾರ್ಗದೆಡೆಗೊಯ್ಯುವ ಶಕ್ತಿಕೇಂದ್ರದಂತಿದ್ದವರು ಜಿ.ಎಸ್.ಎಸ್. ಅವರನ್ನು ಮೇಷ್ಟ್ರಾಗಿ ಪಡೆದದ್ದು ನನ್ನಂತಹ ಸಾವಿರಾರು ವಿದ್ಯಾರ್ಥಿಗಳ ಪಾಲಿಗೆ ಹೆಮ್ಮೆಯ, ಅಭಿಮಾನದ ಸಂಗತಿಯಾಗಿದೆ.

(ಮುಗಿಯಿತು)

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-05-2026

# ಪ್ರಸ್ತುತ ತಿಂಗಳ ಅಂಗಳ

## ಕಾರ್ಯಕ್ರಮಗಳು

(ಅನಿವಾರ್ಯ ಸಂದರ್ಭಗಳಲ್ಲಿ ಕೆಳ ಕಾಣಿಸಿದ ಯಾವುದೇ ಕಾರ್ಯಕ್ರಮಗಳು ಬದಲಾಗಬಹುದು)

**೦೬.೦೬.೨೦೨೬ ಶನಿವಾರ ಬೆಳಗ್ಗೆ ೧೦.೩೦ ಗಂಟೆಗೆ**
ಜಿ.ಎಸ್.ಎಸ್. ಹಾಗೂ ಬಿ.ಸಿ. ರಾಮಚಂದ್ರ ಶರ್ಮರ ವಿಚಾರ ಸಂಕಿರಣ
ಉದ್ಘಾಟನೆ : ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ

**೧೨.೦೬.೨೦೨೬ ಶುಕ್ರವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ಎಸ್.ಕೆ. ಪ್ರೇಮ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ದತ್ತಿ
ವಿಷಯ : ವಚನ ಸಾಹಿತ್ಯ : ಅಲಕ್ಷಿತ ವಚನಕಾರ್ತಿಯರು
ವಿಚಾರ ಮಂಡನೆ : ಡಾ. ಕುಸುಮ ಸಿ.ಆರ್.
ಸಹಾಯಕ ಪ್ರಾಧ್ಯಾಪಕರು, ಎಸ್.ಜೆ.ಆರ್. ಮಹಿಳಾ ಕಾಲೇಜು

**೧೪.೦೬.೨೦೨೬ ಭಾನುವಾರ ಬೆಳಗ್ಗೆ ೧೦.೦೦ ಗಂಟೆಗೆ**
ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ಮಹಾಮಾನವ ಶ್ರೀ ಅಗೋಳಿ ಮಂಜಣ್ಣ ದತ್ತಿ, ಬೆ.ಸು.ನಾ. ಮಲ್ಯ ದತ್ತಿ, ಗುಮ್ಮಡಿ ವಿಠಲರಾವ್ ಗದ್ದಾರ್ ದತ್ತಿಗಳ ಸಂಯುಕ್ತ ಆಶ್ರಯದಲ್ಲಿ ವೈಚಾರಿಕ ಗೀತೆಗಳ ಗಾಯನ ಮತ್ತು ಪ್ರಶಸ್ತಿ ಪ್ರದಾನ

**೧೮.೦೬.೨೦೨೬ ಗುರುವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ವಿಶಾಲಾಕ್ಷಮ್ಮ ಶ್ರೀ ಬಿ.ಎಸ್. ಶಾಮಣ್ಣ (ರಾಮಭದ್ರ ಶಾಸ್ತ್ರೀ) ಸ್ಮರಣಾರ್ಥ ದತ್ತಿ ಉಪನ್ಯಾಸ
ವಿಷಯ: ಕರ್ನಾಟಕದ ಸಂಸ್ಕೃತಿಗೆ ಲಯನೆಸ್‌ಗಳ ಕೊಡುಗೆ
ವಿಚಾರ ಮಂಡನೆ: ಶ್ರೀಮತಿ ಲಲಿತಮ್ಮ ಚಂದ್ರಶೇಖರ್

**೨೪.೦೬.೨೦೨೬ ಬುಧವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಶ್ರೀ ಬಾಪು ರಾಮಣ್ಣ ದತ್ತಿಯ ಆಶ್ರಯದಲ್ಲಿ ಗಮಕ ವಾಚನ ಮತ್ತು ವ್ಯಾಖ್ಯಾನ
ಕಾವ್ಯ ಭಾಗ : ಹರಿಶ್ಚಂದ್ರ ಕಾವ್ಯದ ಗಾನರಾಣಿಯರ ಪ್ರಸಂಗ
ವಾಚನ : ಡಾ. ಲಕ್ಷ್ಮಣದಾಸ್
ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

**೨೬.೦೬.೨೦೨೬ ಶುಕ್ರವಾರ ಸಂಜೆ ೪.೦೦ ಗಂಟೆಗೆ**
ಹಳಗನ್ನಡ ರಸಗ್ರಹಣ ತರಗತಿ ವಿದ್ಯಾರ್ಥಿಗಳ ಸಂಗಮ ಪ್ರಮಾಣಪತ್ರ ಪ್ರದಾನ

**೨೮.೦೬.೨೦೨೬ ಭಾನುವಾರ ಬೆಳಗ್ಗೆ ೧೦.೦೦ ಗಂಟೆಗೆ**
ಪ್ರೊ. ಗೋವಿಂದ ಜಾಲಿಹಾಳ ದತ್ತಿ ಆಶ್ರಯದಲ್ಲಿ ಭಕ್ತಿಗೀತೆಗಳ ಗಾಯನ ಸ್ಪರ್ಧೆ

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩